ಮಾತುಮಲ್ಲ ಅಮೆ



✍️ **ಶ್ರೀವಲ್ಲಿ ರೈ ಮಾರ್ಟೆಲ್**

ಒಂದಾನೊಂದು ಊರು, ಆ ಊರಿನ ತುದಿಯಲ್ಲಿ ಒಂದು ದೊಡ್ಡ ಕೆರೆ ಇತ್ತು. ಅದರಲ್ಲಿ ಸಣ್ಣ ಹಾಗೂ ದೊಡ್ಡ ಮೀನುಗಳು, ಏಡಿಗಳು, ಕಪ್ಪೆಗಳು, ನೀರುನಾಯಿಗಳು, ಅಮೆಗಳು, ಕೊಕ್ಕರೆಗಳು, ಬೆಳ್ಳಕ್ಕಿಗಳು ಹೀಗೆ ಎಲ್ಲವೂ ವಾಸಿಸುತ್ತಿದ್ದವು. ಒಂದು ವರ್ಷ ಮಳೆಯೇ ಬರಲಿಲ್ಲ, ಬರೀ ಬೇಸಿಗೆಯಷ್ಟೇ ಇತ್ತು. ಹೀಗಾಗಿ ಆ ವರ್ಷ ಬರಗಾಲ ಬಂದು ಕೆರೆಯ ನೀರು ಆರಿಹೋಯಿತು. ಮೀನುಗಳನ್ನೆಲ್ಲಾ ಜನರು ಬುಟ್ಟಿಗಳಲ್ಲಿ ತುಂಬಿಕೊಂಡು ಹೋಗಿ ತಿಂದರು. ಹಕ್ಕಿ-ಪಕ್ಷಿಗಳು ಆ ಕೆರೆಯನ್ನು ಬಿಟ್ಟು ಬೇರೆಡೆಗೆ ವಾಸ ಬದಲಿಸಿದವು.

ಕೊನೆಗೆ ಒಂದು ಅಮೆ ಮಾತ್ರ ಉಳಿಯಿತು. ಅದು ತಲೆಯನ್ನು ಹೊರಗೆ ಹಾಕಿ ನಾಲ್ಕೂ ಕಡೆ ನೋಡಿದಾಗ, ಅದರ ಗೆಳೆಯರಾದ ಎರಡು ಬೆಳ್ಳಕ್ಕಿಗಳು ಕಂಡವು. ಕೆಸರಿನ ಅಡಿಯಲ್ಲಿ ಹುಳುಗಳನ್ನು ಹೆಕ್ಕುತ್ತಿದ್ದ ಆ ಹಕ್ಕಿಗಳಿಗೆ ಅಮೆ ಕರೆದು, "ನನಗೆ ಇನ್ನು ನೀರಿಲ್ಲದೆ ಸಾಯುವ ಕಾಲ ಹತ್ತಿರ ಬಂದಿದೆ. ಅದಕ್ಕಿಂತ ಮುಂಚೆ ಕಾಡುಹಂದಿ ಬಂದು ಎನ್ನ ತಲೆಯನ್ನು ಎಳೆದು ತಿಂದರೂ ತಿನ್ನಬಹುದು" ಎಂದು ಅಳುತ್ತಾ ಅಳಲು ತೋಡಿಕೊಂಡಿತು. ಅಮೆ ಗೋಳಿಡುವುದನ್ನು ನೋಡಿ ಬೆಳ್ಳಕ್ಕಿಗಳ ಹೊಟ್ಟೆಯಲ್ಲೂ ಸಂಕಟವಾಯಿತು. ಕೊಂಚ ಯೋಚಿಸಿದ ಆ ಹಕ್ಕಿಗಳು, "ಇಲ್ಲಿಂದ ಸ್ವಲ್ಪ ದೂರದಲ್ಲಿ 'ನೀರೆದೂರು' ಎಂಬಲ್ಲಿ ದೊಡ್ಡ ಕೆರೆ ಒಂದಿದೆ. ನಾವು ಅಲ್ಲಿಗೆ ಹೋಗುತ್ತಿದ್ದೇವೆ. ಆದರೆ ನಿನಗೆ ಅಲ್ಲಿಗೆ ಬರಲು ತಿಂಗಳುಗಳೇ ಬೇಕಾಗಬಹುದು. ನೀನು ತೆವಳುತ್ತಾ ಬರುವಾಗ ಹಾದಿಯಲ್ಲಿ ಯಾರಾದರೂ ಜನರು ನಿನ್ನನ್ನು ಹಿಡಿದುಕೊಂಡು ಹೋಗಬಹುದು. ನಿನ್ನನ್ನು ಪಾತ್ರೆಯಲ್ಲಿ ಹಾಕಿ, ಇನ್ನೊಂದು ದಿನ ಅಡುಗೆ ಮಾಡಿ ತಿಂದೇ ಬಿಡುತ್ತಾರೆ" ಎಂದು ಹೇಳಿದವು. ಹೆದರಿದ್ದ ಅಮೆಗೆ ಈ ಮಾತು ಕೇಳಿ ಉರಿಯುವ ಬೆಂಕಿಗೆ ಸೌದೆ ಹಾಕಿದಂತಾಯಿತು.

ಕೊನೆಗೆ ಅದರಲ್ಲಿ ಒಂದು ಹಕ್ಕಿಗೆ ಒಂದು ಉಪಾಯ ಹೊಳೆಯಿತು. "ನಾವು ನಿನ್ನನ್ನು ಎತ್ತಿಕೊಂಡು ಹೋಗುತ್ತೇವೆ. ನೀನು ಒಂದು ಕೋಲನ್ನು ಗಟ್ಟಿಯಾಗಿ ಬಾಯಿಯಲ್ಲಿ ಕಚ್ಚಿ ಹಿಡಿದುಕೋ. ಆ ಕೋಲಿನ ಎರಡೂ ತುದಿಯನ್ನು ನಾವು ನಮ್ಮ ಕೊಕ್ಕಿನಲ್ಲಿ ಹಿಡಿದು, ಹಾರಿಕೊಂಡು ಹೋಗುತ್ತೇವೆ. ಮುಕ್ಕಾಲು-ಮೂರು ಮುಹೂರ್ತದಲ್ಲಿ (ಕೂಡಲೇ) ಅಲ್ಲಿಗೆ ತಲುಪಬಹುದು" ಎಂದು ಒಂದು ಹಕ್ಕಿ ಹೇಳಿತು.
ಮುಳುಗುವವನಿಗೆ ಕಡ್ಡಿಯೂ ಆಸರೆ ಎನ್ನುವಂತೆ, ಅಮೆ ಕೂಡ ಬದುಕಿ ಉಳಿಯಲು ಆ ಸಾಹಸದ ಕೆಲಸಕ್ಕೆ ತಯಾರಾಯಿತು. ಹಕ್ಕಿ ಹೇಳಿತು, "ಆದರೆ ನೆನಪಿರಲಿ, ತಪ್ಪಿಯೂ ಬಾಯಿ ತೆರೆಯಬಾರದು. ಕೆರೆಗೆ ಕೆಳಗೆ ಇಳಿಯುವ ತನಕ ಬಾಯಿ ಮುಚ್ಚಿಕೊಂಡೇ ಇರಬೇಕು". ಅದಕ್ಕೆ ಅಮೆ "ಆಯಿತು, ಆಯಿತು" ಎಂದು ಎರಡೆರಡು ಬಾರಿ ತಲೆತೂಗಿತು.
ಒಂದು ಮೊಳ ಉದ್ದದ ಗಟ್ಟಿಯಾದ ಕೋಲಿನ ಈ ಕಡೆ ಹಾಗೂ ಆ ಕಡೆ ಎರಡೂ ಹಕ್ಕಿಗಳು ಕೊಕ್ಕಿನಲ್ಲಿ ಹಿಡಿದುಕೊಂಡವು. ನಡುವೆ ಅಮೆ ಬಾಯಿಯಲ್ಲಿ ಗಟ್ಟಿಯಾಗಿ ಕಚ್ಚಿ ಹಿಡಿಯಿತು. ಹಕ್ಕಿಗಳು ಒಟ್ಟಿಗೆ ಮೇಲಕ್ಕೆ ಹಾರಿದವು. ಹಾರುತ್ತಾ ಹಾರುತ್ತಾ ಸ್ವಲ್ಪ ಮುಂದೆ ಹೋದಾಗ, ಊರಿನ ಜನರು ಅದನ್ನು ನೋಡಿ ಆಶ್ಚರ್ಯಪಟ್ಟರು. ಜನರೆಲ್ಲಾ ಒಟ್ಟಾಗಿ ಜೋರಾಗಿ ಮಾತನಾಡಿಕೊಳ್ಳಲು ಶುರುಮಾಡಿದರು, "ಇದೇನು ಕಾಲ ಬಂತು! ಇಲ್ಲಿಯವರೆಗೆ ಹೀಗೆ ಕೇಳೇ ಇಲ್ಲ, ನೋಡೇ ಇಲ್ಲ. ಓ ಓ ಅಲ್ಲಿ ನೋಡಿ!" ಎಂದೆಲ್ಲಾ ಹೇಳುವುದನ್ನು ಕೇಳಿ ಅಮೆ, "ಏನಂತೆ ಗಲಾಟೆ?" ಎಂದು ಕೇಳಿಯೇ ಬಿಟ್ಟಿತು. ಅಷ್ಟು ಹೇಳಿದ್ದೇ ಗೊತ್ತು, ಅಷ್ಟು ಎತ್ತರದಿಂದ ಬಿದ್ದ ಅಮೆ ಕಥೆ ಕೈಲಾಸ ಸೇರಿತು.
ಆಲೋಚಿಸಿ ನಂತರ ಮಾತನಾಡಬೇಕು, ಮಾತನಾಡಿದ ನಂತರ ಆಲೋಚಿಸುವುದಲ್ಲ. ಇಲ್ಲದಿದ್ದರೆ ಈ ಮಾತುಮಲ್ಲ ಅಮೆಗಾದ ಗತಿಯೇ ನಮಗೂ ಆದೀತು.
ಆಧಾರ: ಪಂಚತಂತ್ರ